# ಮಕ್ಕಳ ಹಕ್ಕುಗಳು

ಮಗುವಿಗೆ ಆರೋಗ್ಯದಾಯಕ ವಾತಾವರಣ ಕಲ್ಪಿಸುವುದು ಮತ್ತು ಮಕ್ಕಳಿಗೆ ಸುಂದರ ಬಾಲ್ಯವನ್ನು ಕಲ್ಪಿಸಿಕೊಟ್ಟು ಉತ್ತಮ ಪ್ರಜೆಯನ್ನಾಗಿ ರೂಪಿಸುವ ಜವಾಬ್ದಾರಿಯು ನಾಗರಿಕ ಸಮಾಜದ ಹೊಣೆ. ವಿಶ್ವ ಮಟ್ಟದಲ್ಲಿ ಈ ಕುರಿತು ಚಿಂತನೆಯನ್ನು ಮಾಡಿ ಮಾನವ ಹಕ್ಕುಗಳ ರಕ್ಷಣೆಯನ್ನು ಮಾಡಲು ಮಾನವ ಹಕ್ಕುಗಳ ಘೋಷಣೆಯನ್ನು ಮಾಡಿತು. ಇದರ ನಂತರ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ವಿಶ್ವ ಸಂಸ್ಥೆಯು ಮಕ್ಕಳ ಹಕ್ಕುಗಳ ಒಡಂಬಡಿಕೆಯ ಘೋಷಣೆಯನ್ನು ಮಾಡಿ ಎಲ್ಲಾ ದೇಶಗಳು ಇದಕ್ಕೆ ಬದ್ಧರಾಗುವಂತೆ ಮಾಡಿ ಮಕ್ಕಳ ಹಕ್ಕುಗಳಿಗೆ ಹೆಚ್ಚಿನ ಒತ್ತನ್ನು ನೀಡಲಾಯಿತು.

### ಮಕ್ಕಳು ಎಂದರೆ ಯಾರು?

ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯಂತೆ 18 ವರ್ಷದೊಳಗಿನ ವ್ಯಕ್ತಿಯನ್ನು ಮಕ್ಕಳು ಎಂದು ಪರಿಗಣಿಸಲಾಗಿದೆ.

## ಮಕ್ಕಳ ಹಕ್ಕುಗಳು:

ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ ಘೋಷಣೆಯಾದ ನಂತರ ಮಕ್ಕಳ ಹಕ್ಕುಗಳನ್ನು ಪ್ರಮುಖವಾಗಿ ನಾಲ್ಕು ಹಕ್ಕುಗಳನ್ನಾಗಿ ವಿಂಗಡಿಸಲಾಗಿದೆ.

### ಬದುಕುವ ಹಕ್ಕು:

ಎಲ್ಲಾ ಮಕ್ಕಳಿಗೂ ಬದುಕುವ ಹಕ್ಕಿದೆ. ಪ್ರತಿಯೊಂದು ಮಗುವಿಗೂ ಜನ್ಮ ಹೊಂದುವ, ಜೀವಿಸುವ, ಉತ್ತಮ ಆರೋಗ್ಯ ಸೇವೆ, ಪೌಷ್ಟಿಕ ಆಹಾರ ಪಡೆಯುವ, ಹೆಸರನ್ನು ಹೊಂದುವ ಮತ್ತು ತಾನು ಒಂದು ದೇಶದ ಪ್ರಜೆ ಎಂದು ಗುರುತಿಸಿಕೊಳ್ಳುವ ಹಕ್ಕು.






### ರಕ್ಷಣೆಯ ಹಕ್ಕು:

ಪ್ರತಿಯೊಂದು ಮಗುವು ಯಾವುದೇ ಶೋಷಣೆ ಇಲ್ಲದ ಪರಿಸರದಲ್ಲಿ ಬೆಳೆಯುವುದರ ಜೊತೆಗೆ ರಕ್ಷಣೆ ಪಡೆಯುವುದು ಮತ್ತು ದೌರ್ಜನ್ಯ, ಹಿಂಸೆ, ಒತ್ತಡಗಳಿಲ್ಲದೆ ಸಂತಸದಾಯಕ ಪರಿಸರದಲ್ಲಿ ಬೆಳೆಯಬೇಕು.



### ವಿಕಾಸ ಹೊಂದುವ ಹಕ್ಕು:

ಮಾನಸಿಕ ಮತ್ತು ವ್ಯಕ್ತಿತ್ವ ವಿಕಸನದ ಅವಶ್ಯಕತೆಯ ಜತೆಗೆ ಬೌದ್ಧಿಕ ಬೆಳವಣಿಗೆಗೆ ಪೂರಕವಾದ ವಾತಾವರಣ ರೂಪಿಸುವುದು. ಶಿಕ್ಷಣದ ಹಕ್ಕಿನ ಜೊತೆಯಲ್ಲಿ ಎಲ್ಲಾ ಮಕ್ಕಳಿಗೂ ವಿಶ್ರಾಂತಿ, ಆರೋಗ್ಯ, ರಕ್ಷಣೆ, ಸಾಮಾಜಿಕ ಭದ್ರತೆ, ಬಿಡುವು, ಮನೋರಂಜನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶಗಳ ಲಭ್ಯತೆ.



### ಭಾಗವಹಿಸುವ ಹಕ್ಕು:

ಅಭಿಪ್ರಾಯಗಳಿಗೆ ಮನ್ನಣೆ, ಸ್ವಾತಂತ್ರ್ಯ, ಮಾಹಿತಿ ಲಭ್ಯತೆ, ಬುದ್ಧಿ ಬೆಳವಣಿಗೆಗೆ ಅವಕಾಶ, ಸಂಘಟಿತರಾಗುವುದು ಮತ್ತು ಧಾರ್ಮಿಕ ಹಕ್ಕುಗಳು, ತಮ್ಮ ಕುರಿತು ಆಗುವ ಚರ್ಚೆ, ಚಿಂತನೆಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ಮಕ್ಕಳಿಗೆ ಸಿಗಲೇಬೇಕು.

# ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ

ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ 54 ಪರಿಚ್ಛೇಧಗಳಿದ್ದು ಅದರಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಉಲ್ಲೇಖದ ಜತೆಗೆ ಪ್ರಪಂಚದಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಯ ಆಶಯದೊಂದಿಗೆ ಜಗತ್ತಿನ ಎಲ್ಲಾ ಮಕ್ಕಳು ಸುಂದರವಾದ ಬಾಲ್ಯವನ್ನು ಅನುಭವಿಸುವಂತಾಗುವ ಉದ್ದೇಶವನ್ನು ಹೊಂದಿದೆ. ಈ ಮಕ್ಕಳ ಹಕ್ಕುಗಳನ್ನು 54 ಪರಿಚ್ಛೇಧಗಳಲ್ಲಿ ವಿವರಿಸಲಾಗಿದೆ.

**ಪರಿಚ್ಛೇಧಗಳು:**

1. ಮಕ್ಕಳು ಎಂದರೆ ಯಾರು? ಎಂಬ ವ್ಯಾಖ್ಯಾನ.
2. 18 ವರ್ಷ ತುಂಬುವವರೆಗೆ ಮಕ್ಕಳನ್ನು ಯಾವುದೇ ಕಾರಣಕ್ಕೂ ಯಾರೂ, ಎಲ್ಲಿಯೂ ಬೇಧಭಾವ ಮಾಡಬಾರದು.



3 ಯಾವುದೇ ವಿಚಾರಕ್ಕೂ ಯಾರೇ ಆಗಲಿ ನಿರ್ಧರಿಸುವಾಗ ಅದರಿಂದ ಮಕ್ಕಳಿಗೆ ಒಳ್ಳೆಯದು ಆಗುವುದೋ, ಇಲ್ಲವೋ ಪರಿಶೀಲಿಸಬೇಕು.

4 ಮಕ್ಕಳ ಹಕ್ಕುಗಳನ್ನು ಜಾರಿ ಮಾಡಲು ಸರ್ಕಾರಗಳು ಸೂಕ್ತವಾದ ನಿರ್ಧಾರ, ಯೋಜನೆ, ಕಾರ್ಯಕ್ರಮಗಳನ್ನು ನಡೆಸಬೇಕು.

5 ಮಕ್ಕಳ ಬೆಳವಣಿಗೆ, ರಕ್ಷಣೆ, ಪೋಷಣೆ ಮಾಡಲು ತಂದೆ-ತಾಯಿ ಜವಾಬ್ದಾರರು.

6. ಎಲ್ಲಾ ಮಕ್ಕಳಿಗೂ ಸಾಯದೆ ಬದುಕಿ ಉಳಿಯುವ ಮತ್ತು ಆರೋಗ್ಯದಿಂದ ಜೀವಿಸುವ ಹಕ್ಕು.
7. ಮಕ್ಕಳೂ ಪ್ರಜೆಗಳೇ, ಪ್ರತೀ ಮಗುವಿಗೂ ಹೆಸರು, ದೇಶ, ಕುಟುಂಬ ಹೊಂದುವ ಹಕ್ಕು ಇದೆ.
8. ಮಕ್ಕಳ ಗೌರವದ ಹಕ್ಕಿಗೆ ಯಾರೂ ತೊಂದರೆ ಅವಮಾನ ಮಾಡಬಾರದು.
9. ತಂದೆ ತಾಯಿ ಪೋಷಕರಿಂದ ಯಾರೂ ಮಕ್ಕಳನ್ನು ಯಾವುದೇ ಕಾರಣಕ್ಕೂ ಬೇರೆ ಮಾಡಬಾರದು.
10. ಮಕ್ಕಳು ಮತ್ತು ಪೋಷಕರನ್ನು ಬಲವಂತವಾಗಿ ದೂರ ಮಾಡಲೇಬಾರದು.
11. ಮಕ್ಕಳನ್ನು ಅಪಹರಣ, ಬಚ್ಚಿಡುವುದು, ಮಾರಾಟ ಮಾಡುವುದು, ಮಕ್ಕಳನ್ನು ವೇಶ್ಯಾವಾಟಿಕೆಗೆ ದೂಡುವುದು ಶಿಕ್ಷಾರ್ಹ ಅಪರಾಧ.

12 ಮಕ್ಕಳಿಗೆ ಅಭಿಪ್ರಾಯಗಳನ್ನು ಕೊಡುವ ಹಕ್ಕು ಇದೆ.

13. ಮಕ್ಕಳಿಗೆ ಮಾಹಿತಿ ಪಡೆಯುವ ಹಾಗೂ ವಿಚಾರ ತಿಳಿಸುವ ಹಕ್ಕು ಇದೆ.
14. ತಾಯಿ ತಂದೆಯ ಮಾರ್ಗದರ್ಶನದಲ್ಲಿ ವಿಚಾರ ಮಾಡುವ, ಇಷ್ಟದಂತೆ ಆಲೋಚಿಸುವ, ಧಾರ್ಮಿಕ ವಿಧಿಗಳನ್ನು ಆಚರಿಸುವ ಹಕ್ಕು ಇದೆ.
15. ಮಕ್ಕಳಿಗೆ ಬೆರೆಯುವ, ಸಂಘ ಮಾಡುವ, ಚರ್ಚಿಸಿ, ಚಿಂತಿಸಿ ನಿರ್ಧರಿಸುವ ಹಕ್ಕು ಇದೆ.
16. ಮಕ್ಕಳಿಗೂ ಖಾಸಗಿತನದ ಹಕ್ಕು ಇದೆ.
17. ಮಕ್ಕಳಿಗೆ ಸುತ್ತಮುತ್ತಲಿನ ಜಗತ್ತಿನ ಮಾಹಿತಿಗಳೂ ಲಭ್ಯವಿರಬೇಕು.
18. ತಂದೆ ತಾಯಿಯೊಡನೆ ಇದ್ದು ಬೆರೆಯುವ ಹಕ್ಕು ಎಲ್ಲಾ ಮಕ್ಕಳಿಗೆ ಇದೆ. ಇದಕ್ಕೆ ಸರಕಾರ ಬೆಂಬಲ ನೀಡಬೇಕು.
19. ಮಕ್ಕಳಿಗೆ ಹೊಡೆದು, ಬೈದು ನಿರ್ಲಕ್ಷ್ಯ ಮಾಡಿ ಕಿರುಕುಳ ಕೊಡುವುದು, ದುಡಿಸಿ ತೊಂದರೆ, ಹಿಂಸೆ ಕೊಡುವುದು ಅಪರಾಧ ಮತ್ತು ಶಿಕ್ಷಾರ್ಹ.

20. ಹೆತ್ತವರು ಅಥವಾ ಪೋಷಕರಿಲ್ಲದ ಮಕ್ಕಳಿಗೆ ವಿಶೇಷ ಆರೈಕೆ ಮತ್ತು ರಕ್ಷಣೆ ನೀಡಬೇಕು.

21. ಮಕ್ಕಳನ್ನು ದತ್ತು ನೀಡಬೇಕೆಂದಾಗ ಅದು ಮಗುವಿನ ಹಿತದೃಷ್ಟಿಯಿಂದಲೇ ಆಗಬೇಕು.

22. ಕುಟುಂಬ ಇಲ್ಲವೇ ಆಶ್ರಯ ಇಲ್ಲದ ಮಕ್ಕಳಿಗೆ ರಕ್ಷಣೆ ನೀಡುವುದು ಸಮಾಜ ಮತ್ತು ಸರಕಾರದ ಕರ್ತವ್ಯ.

23. ದೈಹಿಕ, ಮಾನಸಿಕ ತೊಂದರೆಗಳಿದ್ದರೂ ಗೌರವಯುತವಾಗಿ ಪೂರ್ಣವಾದ ಜೀವನ ನಡೆಸುವ ಹಕ್ಕು ಮಕ್ಕಳಿಗೆ ಇದೆ.

24. ಆರೋಗ್ಯ ಸೇವಾ ಸೌಲಭ್ಯಗಳೂ ಮಕ್ಕಳಿಗೆ ಸಿಗಲೇಬೇಕು.

25. ಶಿಕ್ಷಣ, ರಕ್ಷಣೆ, ಚಿಕಿತ್ಸೆಗೆ ಮಕ್ಕಳು ಕುಟುಂಬದಿಂದ ದೂರ ಇದ್ದಲ್ಲಿ ಸರಕಾರವು ಕಾಲ ಕಾಲಕ್ಕೆ ಅಲ್ಲಿನ ವ್ಯವಸ್ಥೆ, ರಕ್ಷಣೆ ಮತ್ತು ಪ್ರಗತಿಯ ಕುರಿತು ಪರಿಶೀಲನೆ ಮಾಡಬೇಕು.



26. ಬಡವರು, ನಿರ್ಗತಿಕ ಕುಟುಂಬಗಳ ಮಕ್ಕಳ ಪ್ರಗತಿಗಾಗಿ ಸರಕಾರಗಳು ಸಾಮಾಜಿಕ ಭದ್ರತೆ, ವಿಮೆ ಇತ್ಯಾದಿ ಸೇವೆಗಳನ್ನು ಒದಗಿಸಲೇಬೇಕು.

27. ಮಕ್ಕಳ ದೈಹಿಕ, ಮಾನಸಿಕ ಅಭಿವೃದ್ಧಿಗೆ ಪೂರಕವಾಗುವ ಜೀವನ ಮಟ್ಟವನ್ನು ತಕ್ಕ ಮಟ್ಟಿಗೆ ಒದಗಿಸುವುದು ಹೆತ್ತವರ ಕರ್ತವ್ಯ.

28. ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಹಾಗೂ ಗುಣಮಟ್ಟದ ಶಿಕ್ಷಣ ಪಡೆಯುವ ಹಕ್ಕು ಇದೆ.

29. ವ್ಯಕ್ತಿತ್ವ, ಪ್ರತಿಭೆ, ಮಾನಸಿಕ ಮತ್ತು ದೈಹಿತ ಸಾಮರ್ಥ್ಯಗಳು ವಿಕಾಸವಾಗುವಂತಹ ಶಿಕ್ಷಣ ಮಕ್ಕಳಿಗೆ ಸಿಗಲೇಬೇಕು.

30. ಪ್ರತೀ ಮಗುವಿಗೆ ತಮ್ಮ ಮಾತೃಭಾಷೆ, ಸಂಸ್ಕೃತಿ ಮತ್ತು ಧರ್ಮವನ್ನು ಅನುಸರಿಸುವ ಹಕ್ಕು ಇದೆ.

31. ವಿರಾಮ, ವಿಶ್ರಾಂತಿ ಹೊಂದುವ, ಆಟ, ಮನರಂಜನೆ, ಸೃಜನಶೀಲತೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಮಕ್ಕಳ ಹಕ್ಕು.

32. ಆರೋಗ್ಯ, ಶಿಕ್ಷಣ, ಅಭಿವೃದ್ಧಿ, ಬಾಲ್ಯ ಅನುಭವಿಸುವುದಕ್ಕೆ ತೊಂದರೆ ಕೊಡಬಹುದಾದ ಯಾವುದೇ ರೀತಿಯ ದುಡಿಮೆಗೆ ಮಕ್ಕಳನ್ನು ದೂಡಬಾರದು.

33. ಮಕ್ಕಳಿಂದ ಮಾರಕವಾದ ವಸ್ತುಗಳನ್ನು ಮಾಡಿಸುವುದು, ಮಾರುವುದು, ಸಾಗಿಸುವುದು, ತರಿಸುವುದು ಹಾಗೂ ಮಕ್ಕಳಿಗೆ ಸೇವಿಸಲು ಕೊಡುವುದು ಅಪರಾಧ.

34. ಮಕ್ಕಳ ಮೇಲೆ ಲೈಂಗಿಕ ಶೋಷಣೆ ಮಾಡುವುದು ಶಿಕ್ಷಾರ್ಹ ಅಪರಾಧ.

35. ಮಕ್ಕಳನ್ನು ಅಪಹರಿಸುವುದು, ಸಾಗಿಸುವುದು, ಬಚ್ಚಿಡುವುದು ಮತ್ತು ಮಾರಾಟ ಮಾಡುವುದು ಶಿಕ್ಷಾರ್ಹ ಅಪರಾಧ



36. ಮಕ್ಕಳ ಶ್ರೇಯೋಭಿವೃದ್ಧಿ, ಒಳಿತಿಗೆ ತೊಂದರೆ ಕೊಡುವಂತ ಯಾವುದೇ ಕೃತ್ಯವನ್ನು ಯಾರೂ ಮಾಡದಂತೆ ಸರ್ಕಾರ ತಡೆಯಬೇಕು.

37. ಮಕ್ಕಳನ್ನು ಹಿಂಸೆ, ಶಿಕ್ಷೆ ಮತ್ತು ಅನಧಿಕೃತ ಬಂಧನಕ್ಕೆ ಗುರಿಯಾಗಿಸಬಾರದು.

38. ಸಶಸ್ತ್ರ ಹೊಡೆದಾಟಕ್ಕೆ , ಸೈನ್ಯಕ್ಕೆ ಮಕ್ಕಳನ್ನು ಸೇರಿಸಿಕೊಳ್ಳಬಾರದು.

39. ಮಕ್ಕಳು, ಸಶಸ್ತ್ರ, ಸಂಘರ್ಷ, ಹಿಂಸೆ, ತಿರಸ್ಕಾರ, ದುರುಪಯೋಗ ಮತ್ತು ಶೋಷಣೆಗೆ ಗುರಿಯಾಗಿದ್ದಲ್ಲಿ ಅವರಿಗೆ ಚಿಕಿತ್ಸೆ, ಆರೈಕೆ ಮತ್ತು ಸಾಮಾಜಿಕ ಪುನರ್ವಸತಿಯನ್ನು ಶೀಘ್ರವಾಗಿ ಮಾಡಬೇಕು.

40. ಮಕ್ಕಳು ಕಾನೂನು ಮೀರಿದಲ್ಲಿ ಅವರ ವ್ಯಕ್ತಿತ್ವ ಮತ್ತು ಗೌರವಗಳಿಗೆ ಧಕ್ಕೆಯಾಗದಂತೆ ಮನ ಪರಿವರ್ತನೆ ಮಾಡಲು ಅವಕಾಶ ಮಾಡಿ ಕೊಡಬೇಕು.

41. ಎಲ್ಲಾ ಮಕ್ಕಳಿಗೆ ಎಲ್ಲಾ ಹಕ್ಕುಗಳು ಸಿಗಲೇಬೇಕು. ಇದಕ್ಕೆ ಯಾವುದೇ ಕಾಯಿದೆ, ಕಾನೂನು ಮತ್ತು ನಿಯಮಗಳು ಅಡ್ಡಿಯಾಗಬಾರದು.

42. ದೇಶದ ಎಲ್ಲಾ ಮಕ್ಕಳು ಮತ್ತು ವಯಸ್ಕರಿಗೆ ಮಕ್ಕಳ ಹಕ್ಕುಗಳ ಬಗ್ಗೆ ತಿಳಿಸಲು ಮತ್ತು ಇದನ್ನು ಜಾರಿ ಮಾಡಲು ವ್ಯಾಪಕ ಪ್ರಚಾರ ಮಾಡುತ್ತಲೇ ಇರಬೇಕು.

43. ಮಕ್ಕಳ ಹಕ್ಕುಗಳನ್ನು ಹೇಗೆ ಜಾರಿ ಮಾಡಲಾಗುತ್ತಿದೆಯೆಂದು ಪ್ರತೀ ಸರಕಾರಗಳು ದೇಶದ ನಾಗರಿಕರಿಗೆ, ಮಕ್ಕಳಿಗೆ ಮತ್ತು ವಿಶ್ವಸಂಸ್ಥೆಗೆ ವರದಿ ನೀಡುತ್ತಿರಬೇಕು.

44. ಮಕ್ಕಳ ಹಕ್ಕುಗಳ ಉಸ್ತುವಾರಿ ಸಮಿತಿ ರಚನೆ ಮತ್ತು ವಿಶ್ವ ಸಂಸ್ಥೆಗೆ ವರದಿ ಸಲ್ಲಿಸುವುದು

45. ವಿಶ್ವ ಸಂಸ್ಥೆಗೆ ಪರ್ಯಾಯ ವರದಿ ನೀಡಲು ಅವಕಾಶ ಇದೆ.

46. ಒಡಂಬಡಿಕೆ, ಒಪ್ಪಿಗೆ, ತಿದ್ದುಪಡಿ ಮತ್ತು ಹಿಂಜರಿಕೆ–ದೇಶಗಳಿಗೆ ಸಹಿ ಮಾಡಲು ಆಹ್ವಾನ

47. ಒಡಂಬಡಿಕೆಯ ಪ್ರತಿ ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯ ಬಳಿ ಇರುವುದು



48. ಆಹ್ವಾನ

49. ಒಪ್ಪಿಗೆ ಮತ್ತು ಜಾರಿ

50. ತಿದ್ದುಪಡಿಗೆ ಅವಕಾಶ

51. ತಕರಾರುಗಳು

52. ಒಡಂಬಡಿಕೆಯಿಂದ ಹಿಂಜರಿತ

53. ಮಕ್ಕಳ ಹಕ್ಕುಗಳ ಮುಖ್ಯ ಪ್ರತಿ ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳ ಬಳಿ ಇರುವುದು.

54. ಮಕ್ಕಳ ಹಕ್ಕುಗಳ ವಿವಿಧ ಭಾಷಾ ಪ್ರತಿಗಳು ವಿಶ್ವಸಂಸ್ಥೆಯಲ್ಲಿ ಇಡುವುದು.

## ಮಕ್ಕಳ ಸಂಬಂಧಿತ ಕಾನೂನು ಮತ್ತು ಕಾಯಿದೆಗಳು

- ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿನ ಕಾಯಿದೆ–2009
- ಬಾಲ್ಯಾ ವಸ್ಥೆಯ ಹಾಗೂ ಕಿಶೋರಾವಸ್ಥೆಯ (ನಿಷೇದ ಮತ್ತು ನಿಯಂತ್ರಣ) ಕಾಯ್ದೆ 1986 ತಿದ್ದುಪಡಿ –2016
- ಮಕ್ಕಳ ರಕ್ಷಣಾ ನೀತಿ–2016
- ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಕಾಯಿದೆ–2015
- ಬಾಲ್ಯ ವಿವಾಹ ನಿಷೇಧ ಅಧಿನಿಯಮ–2006.
- ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ( ಪೋಕ್ಸೋ)–2012
- ದ ಕಮಿಷನ್ಸ್ ಆಫ್ ಪ್ರೊಟೆಕ್ಷನ್ ಆಫ್ ಚೈಲ್ಡ್ ರೈಟ್ಸ್ ಆ್ಯಕ್ಟ್–2005
- ಇಮ್‌ಮೊರಲ್ ಟ್ರಾಫಿಕ್ ಪ್ರಿವೆನ್‌ಶನ್ ಆ್ಯಕ್ಟ್–1986

# ಮಕ್ಕಳ ರಕ್ಷಣೆಗಾಗಿ ಇರುವ ಮಕ್ಕಳ ರಕ್ಷಣಾ ವ್ಯವಸ್ಥೆಗಳು

## ಸ್ಥಳೀಯ ಮಟ್ಟ

- ಶಾಲೆ /ಶಾಲಾಭಿವೃದ್ಧಿ & ಮೇಲುಸ್ತುವಾರಿ ಸಮಿತಿ
- ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್
- ಪ್ರಾಥಮಿಕ ಆರೋಗ್ಯ ಕೇಂದ್ರ
- ಗ್ರಾಮ ಪಂಚಾಯತ್, ಗ್ರಾಮ ಲೆಕ್ಕಿಗರು
- ಮಕ್ಕಳ ವಿಶೇಷ ಗ್ರಾಮ ಸಭೆ
- ಮಕ್ಕಳ ರಕ್ಷಣಾ ಸಮಿತಿ
- ಬಾಲ್ಯ ವಿವಾಹ ನಿಷೇಧ ಅಧಿಕಾರಿ
- ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ
- ಅಂಗನವಾಡಿ

# ಮಕ್ಕಳ ರಕ್ಷಣೆಗಾಗಿ ಇರುವ ಮಕ್ಕಳ ರಕ್ಷಣಾ ವ್ಯವಸ್ಥೆಗಳು

## ತಾಲೂಕು-ಜಿಲ್ಲಾ ಮಟ್ಟ

- ಮಕ್ಕಳ ಸಹಾಯವಾಣಿ 1098/112
- ಉಪನಿರ್ದೇಶಕರು/ ಕ್ಷೇತ್ರ ಶಿಕ್ಷಣಾಧಿಕಾರಿ, ಶಾಲಾ ಶಿಕ್ಷಣ & ಸಾಕ್ಷರತಾ ಇಲಾಖೆ
- ಮಕ್ಕಳ ಕಲ್ಯಾಣ ಸಮಿತಿ
- ಸಮಾಜ ಕಲ್ಯಾಣ ಇಲಾಖೆ
- ಬಾಲ ನ್ಯಾಯ ಮಂಡಳಿ
- ಸಮಗ್ರ ಶಿಕ್ಷಣ
- ಮಕ್ಕಳ ಸ್ನೇಹಿ ಪೊಲೀಸ್ ಅಧಿಕಾರಿ
- ಕಾರ್ಮಿಕ ಇಲಾಖೆ
- ಮಕ್ಕಳ ವಿಶೇಷ ಪೊಲೀಸ್ ಘಟಕ
- ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ
- ಜಿಲ್ಲಾ ಮಕ್ಕಳ ರಕ್ಷಣಾ ಘಟಕ
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
- ಮಕ್ಕಳ ಬಗ್ಗೆ ಕೆಲಸ ಮಾಡುವ ಸರಕಾರೇತರ ಸಂಸ್ಥೆ

## ರಾಜ್ಯ-ರಾಷ್ಟ್ರ ಮಟ್ಟ

- ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ
- ಮಕ್ಕಳ ರಕ್ಷಣಾ ನಿರ್ದೇಶನಾಲಯ
- ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ಪ್ರಕಟಣೆ : ಪಡಿ (ಶಿಕ್ಷಣ ಹಕ್ಕು ಕಾಯ್ದೆ-2009ರ ಸಮರ್ಪಕ ಅನುಷ್ಠಾನಕ್ಕಾಗಿ ಮಗು ಸ್ನೇಹಿ ಸಮಾಜ ನಿರ್ಮಾಣ ಯೋಜನೆ
ಕುಲಾಸೊ ಆಸ್ಪತ್ರೆಯ ಬಳಿ, 2ನೇ ಅಡ್ಡ ರಸ್ತೆ, ಬೆಂದೂರ್‌ವೆಲ್, ಮಂಗಳೂರು - 2,
ದೂರವಾಣಿ : 0824-2439895 www.padivalored.com

ಖಾಸಗಿ ಪ್ರಸಾರಕ್ಕಾಗಿ